<u>ಕರ್ನಾಟಕ ವಿಧಾನ ಪರಿಷತ್ತು</u>

ಸದಸ್ಯರ ಹೆಸರು	:	ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ
ಚುಕ್ಕೆ ರಹಿತ ಪ್ರಶ್ನೆ	:	1309
ಉತ್ತರ ದಿನಾಂಕ	:	24-12-2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಲ್ಲಿ ಹರಿಯುವ ಸೌಪರ್ಣಿಕಾ, ಕೊಲ್ಲೂರು ಚಕ್ರಾ, ವರಾಹಿ, ಕುಬ್ಜ, ಹಾಲಾಡಿ, ಸೀತಾ, ಸ್ವರ್ಣ ಉದ್ಯಾವರ, ಮಡಿಸಾಲು, ಪಲ್ಗುಣಿ (ಎಣ್ಣೆಹೊಳೆ) ಮೂಲ್ಕಿ (ಶಾಂಭವಿ) ಹೊಳೆಗಳ ನದಿ ದಂಡೆಯಲ್ಲಿರುವ ಗ್ರಾಮಗಳು ಯಾವುವು? (ನದಿವಾರು, ಗ್ರಾಮ ಪಂಚಾಯತಿವಾರು, ಗ್ರಾಮವಾರು ಮಾಹಿತಿ ನೀಡುವುದು)	ಉಡುಪಿ ಜಿಲ್ಲೆಯಲ್ಲಿ ಹರಿಯುವ ಸೌಪರ್ಣಿಕಾ (ಕೊಲ್ಲೂರು), ಚಕ್ರಾ, ವರಾಹಿ, ಕುಬ್ಜ, ಸೀತಾ, ಸ್ವರ್ಣ, ಉದ್ಯಾವರ, ಮಡಿಸಾಲು, ಫಾಲ್ಗುಣಿ (ಎಣ್ಣೆ ಹೊಳೆ), ಮೂಲ್ಕಿ (ಶಾಂಭಾವಿ), ಹೊಳೆಗಳ ನದಿ ದಂಡೆಯಲ್ಲಿರುವ ಗ್ರಾಮ ಪಂಚಾಯತ್ ಹಾಗೂ ಗ್ರಾಮಗಳ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.
ಆ)	ಉಡುಪಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ನದಿ ಮೂಲವನ್ನು ಪಡೆದ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು; (ಗ್ರಾಮ ಪಂಚಾಯತಿವಾರು, ಯೋಜನೆವಾರು ಮಾಹಿತಿಯನ್ನು ನೀಡುವುದು)	ಉಡುಪಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ನದಿ ಮೂಲವನ್ನು ಪಡೆದ ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ 117. ಗ್ರಾಮ ಪಂಚಾಯತಿವಾರು ಹಾಗೂ ಯೋಜನೆವಾರು ವಿವರಗಳನ್ನು **ಅನುಬಂಧ-2ರಲ್ಲಿ** ಲಗತ್ತಿಸಿದೆ.
ಇ)	ಜಲ ಜೀವನ್ ಮಿಷನ್‌ನಡಿಯಲ್ಲಿ ಈ ನದಿಗಳಿಂದ ಗುರುತಿಸಿದ ನೀರಿನ ಪ್ರಮಾಣವೆಷ್ಟು; ನೀರಿನ ಲಭ್ಯತೆ ಕುರಿತು ಸಂಬಂಧಿಸಿದ ಇಲಾಖೆಯಿಂದ ದೃಢೀಕರಣ ಪಡೆಯಲಾಗಿದೆಯೇ; (ಪ್ರತಿಯನ್ನು ಒದಗಿಸುವುದು)	• ಜಲಜೀವನ್ ಮಿಷನ್ ಯೋಜನೆಯಡಿ ಉಡುಪಿ ಜಿಲ್ಲೆಯ ಗ್ರಾಮ ಪಂಚಾಯತ್ ಗಳಿಗೆ ಗುರುತಿಸಿದ ನದಿಗಳಿಂದ ಪಡೆಯುವ ನೀರಿನ ಪ್ರಮಾಣವನ್ನು **ಅನುಬಂಧ-3**ರಲ್ಲಿ ಲಗತ್ತಿಸಿದೆ. • ವಾರಾಹಿ ನದಿಯಿಂದ ನೀರನ್ನು ಪಡೆಯಲು ಈಗಾಗಲೇ ಅನುಮೋದನೆಯಾಗಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಜಲ ಸಂಪನ್ಮೂಲ ಇಲಾಖೆಯಿಂದ ಸಹಮತಿ ಪಡೆಯಲಾಗಿದೆ (**ಪ್ರತಿಯನ್ನು ಲಗತ್ತಿಸಿದೆ**) ಹಾಗೂ ಮುಂಬರುವ ಯೋಜನೆಗಳಿಗೂ ಸಹ ಅವಶ್ಯಕತೆಗನುಗುಣವಾಗಿ ನಿಯಾಮಾನುಸಾರ ಅನುಮತಿ ಪಡೆಯಲಾಗುವುದು.